ಡಿ.ಡಬ್ಲೂ -1(ಕುಮಾರ್)

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ದೂರುದಾರರ ಪರ ವಕೀಲರಿಂದ:-

ಕೆ.ಬಿ ನಂಜೇಗೌಡ ಅಂದರೆ ಪ್ರಸ್ತುತ ಪ್ರಕರಣದ ದೂರುದಾರರು ನನ್ನ ಸ್ನೇಹಿತ ಎಂದರೆ ಸರಿ. ಜೂನ್ 2017ರ ಮೊದಲನೇ ವಾರದಲ್ಲಿ ನನ್ನ ಕುಟುಂಬದ ನಿರ್ವಹಣೆ ಮತ್ತು ಪೋಷಣೆಗೆ ನನಗೆ ಹಣದ ಅಗತ್ಯ ಇದ್ದು ನಂಜೇಗೌಡರಿಂದ 4 ಲಕ್ಷ ಸಾಲ ಪಡೆದಿರುತ್ತೇನೆ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿದು ಮುಂದುವರೆದು ನಾನು 2012ರಲ್ಲಿ 1 ಲಕ್ಷ ಮಾತ್ರ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. 2012ರಲ್ಲಿ ನಾನು ದೂರುದಾರರಿಂದ 1 ಲಕ್ಷ ಹಣ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸದರಿ 4 ಲಕ್ಷ ಹಣವನ್ನು ಪಡೆದ 2 ತಿಂಗಳ ನಂತರ ವಾಪಸ್ಸು ಕೊಡುವುದಾಗಿ ಹೇಳಿದ್ದರೂ ಸಹ ಅವರಿಗೆ ಹಣ ವಾಪಸ್ಸು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪಡೆದ ಹಣವನ್ನು ತೀರಿಸುವ ಸಲುವಾಗಿ ದಿನಾಂಕ 28.08.2017ರಂದು ಕೆನರಾ ಬ್ಯಾಂಕಿನ 2 ಚೆಕ್‌ಗಳನ್ನು ಅವರಿಗೆ ಕೊಟ್ಟಿರುತ್ತೇನೆ ಎಂದರೆ ನಾನು 2012ರಲ್ಲಿ 2 ಖಾಲಿ ಚೆಕ್ ನಲ್ಲಿ ಸಹಿ ಮಾಡಿ ಅವರಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

ನಿಪಿ-1 ಮತ್ತು 2ರ ಚೆಕ್ಕುಗಳಲ್ಲಿ ಇರುವ ಸಹಿ ನನ್ನದಾಗಿರುತ್ತದೆ ಆದರೆ ಬರವಣಿಗೆ ನನ್ನದಲ್ಲ. ನಿಪಿ-1 ಮತ್ತು ನಿಪಿ-2ರಲ್ಲಿ ನಾನೇ ದಿನಾಂಕ ಮತ್ತು ಎಲ್ಲಾ ಬರವಣಿಗೆ ಮಾಡಿ ಸಹಿ ಮಾಡಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಂತರ ನಂಜೇಗೌಡರು ಯೂಕೋ ಬ್ಯಾಂಕಿನಲ್ಲಿ ನಗದೀಕರಣಕ್ಕಾಗಿ ಚೆಕ್ ಕೊಟ್ಟಾಗ

ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಷರಾ ಬಂದಿರುತ್ತದೆ ಎಂದರೆ ಸರಿಯಲ್ಲ. ನಂತರ ನಂಜೇಗೌಡರು ನನ್ನ ಬಳಿ ಬಂದು ಈ ರೀತಿ ಖಾತೆಯಲ್ಲಿ ಹಣ ಇಲ್ಲ ಚಕ್ ಬೌನ್ಸ್ ಆಗಿರುತ್ತದೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಸಂಬಂಧ ನನಗೆ ಬ್ಯಾಂಕಿನಿಂದ ಮೆಸೆಜ್ ಬಂದಿರುತ್ತದೆ ಎಂದರೆ ಸರಿ.

ನಾನು ಈ ರೀತಿ ಹಣ ವಾಪಸ್ಸು ಕೊಡದೇ ಇದ್ದಾಗ ಅವರು ತಮ್ಮ ವಕೀಲರ ಮೂಲಕ ನೋಟಿಸು ಕೊಟ್ಟಿದ್ದರು ಎಂದರೆ ಸರಿ. ಸದರಿ ನೋಟಿಸಿಗೆ ನಾನು ಪ್ರತ್ಯೂತ್ತರವನ್ನು ಕೊಟ್ಟಿರುವುದಿಲ್ಲ. ನನಗೆ ಅನಾರೋಗ್ಯವಾಗಿದ್ದ ಕಾರಣ ಪ್ರತ್ಯೂತ್ತರ ಕೊಡಲು ಆಗಿರುವುದಿಲ್ಲ. ಆರೋಗ್ಯ ಸರಿಯಾದ ಮೇಲೆ ಪ್ರತ್ಯೂತ್ತರ ಕೊಡಬಹುದಿತ್ತು ಎಂದರೆ ಸಾಕ್ಷಿಯು ನಾನು ಎಲ್ಲಾ ಹಣ ಕೊಟ್ಟಿದ್ದೆನು ಇಂದೋ ನಾಳೆ ಸರಿಹೋಗಬಹುದು ರಾಜಿ ಮಾಡಿಕೊಳ್ಳಬಹುದು ಎಂದು ಸುಮ್ಮನಿದ್ದೆ ಎಂದು ನುಡಿಯುತ್ತಾರೆ. ಒಂದು ಲಕ್ಷದ ವ್ಯವಹಾರದ ಸಂಬಂಧ ನಾನು ನನ್ನ ಮುಖ್ಯ ವಿಚಾರಣೆ ಮತ್ತು ಪಿಡ್ಲ್ಯೂ -1ರವರನ್ನು ಪಾಟೀ ಸವಾಲು ಮಾಡುವ ಸಂದರ್ಭದಲ್ಲಿ ಪ್ರಸ್ತಾಪಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಂಜೇಗೌಡರು ನನಗೆ ಸದರಿ ಖಾಲಿ ಚೆಕ್ ಗಳನ್ನು ವಾಪಸ್ಸು ಕೊಡದೇ ಇದ್ದಾಗ ನಾನು ಅವರ ವಿರುದ್ಧ ಯಾವುದೇ ದೂರು ನೀಡಿರುವುದಿಲ್ಲ. ನಾನು 1 ಲಕ್ಷ ಸಾಲದ ಹಣ ಪಡೆದ ಬಗ್ಗೆ ಹಾಗೂ ತೀರಿಸಿದ ಬಗ್ಗೆ ಯಾರು ಸಾಕ್ಷಿದಾರರು ಇರುವುದಿಲ್ಲ. ನನ್ನ ಮತ್ತು ಅವರ ಮಧ್ಯೆ ಯಾವುದೇ 1 ಲಕ್ಷದ ವ್ಯವಹಾರ ಆಗಿರುವುದಿಲ್ಲ ಮತ್ತು ಆ ಸಮಯದಲ್ಲಿ ನನ್ನ ಹೆಂಡತಿಗೆ ಸೇರಿದ ಖಾತೆಯ ಚಕ್

ನಾನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದೂರುದಾರರು ನನ್ನ ಬಳಿ ಬಡ್ಡಿ ರೂಪದಲ್ಲಿ ಯಾವುದೇ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ಹಣ ವಾಪಸ್ಸು ಕೊಡಬೇಕಾಗಿರುವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದೇ ಇದ್ದರೂ ಸಹ ಖಾಲಿ ಚೆಕ್ ನೀಡಿ ಉದ್ದೇಶಪೂರ್ವಕಾವಾಗಿ ಮೋಸ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದೂರುದಾರರು ವ್ಯವಹಾರದಿಂದ ಬಂದ ಉಳಿತಾಯದ ಹಣವನ್ನು ನನಗೆ ಸಾಲವಾಗಿ ನೀಡಿದ್ದರು ಎಂದರೆ ಸರಿ. ಕೇವಲ ಹಣ ವಾಪಸ್ಸು ಕೊಡುವುದರಿಂದ ತಪ್ಪಿಸಿಕೊಳ್ಳಲು ನಾನು ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಖಾಲಿ ಚೆಕ್ ಗಳನ್ನು ದೂರುದಾರರು ನನಗೆ ವಾಪಸ್ಸು ಕೊಡದೇ ಇರುವ ಕಾರಣ ನಾನು ದೂರು ನೀಡುವುದು ಅಥವಾ ವಕೀಲರ ಮೂಲಕ ನೋಟಿಸು ಕೊಡುವುದಾಗಲೀ ಅಥವಾ ನ್ಯಾಯಾಲಯದಲ್ಲಿ ಯಾವುದೇ ಕೇಸು ಹಾಕಿರುವುದಿಲ್ಲ ಎಂದರೆ ಸರಿ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

1ನೇ ಅಪರ ಸಿವಿಲ್ ನ್ಯಾಯಾಧೀಶರು,
ಕನಕಪುರ.

ಡಿ.ಡಬ್ಲೂ -1(ಕುಮಾರ್)